೧	೨	೩	೪
೫	ಸೀಮೆಎಣ್ಣೆ	ಒಂದು ಪಾರಕ್ಕೆ ೪ ಲಿ. ಗರಿಷ್ಟ ೧೬ ಲೀಟರ್ ಒಂದು ಕಾರ್ಡಿಗೆ ಒಂದು ತಿಂಗಳಿಗೆ.	ಮಿತಿ ಇಲ್ಲ.

(ಇ) ಚಾರಿತ್ರಿಕ ವಾಸ್ತವಾಂಶ ಪೀಠಿ ಧಾರಣೆ ಮತ್ತು ವಿವಿಧ ಪಟ್ಟಣಗಳ ಆವಶ್ಯಕತೆಗಳ ಆಧಾರದ ಮೇಲೆ ಆಹಾರ ಧಾನ್ಯಗಳನ್ನು ಹಂಚಲಾಗುತ್ತಿದೆ.

ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ಅಧ್ಯಕ್ಷರಿಗೆ ಅಧಿಕಾರಗಳನ್ನು ನೀಡುವ ಬಗ್ಗೆ

೧೮೧ (೪೩೬) ಶ್ರೀ ಆರ್.ಎಸ್. ಮಾನೆ.—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ಅಧ್ಯಕ್ಷರಿಗೆ ಆಡಳಿತಾತ್ಮಕ ಅಥವಾ ಕಾರ್ಯಕಾರಿ ಅಧಿಕಾರಗಳನ್ನು ಕೊಡಲಾಗಿದೆಯೇ?

ಆ) ಹಾಗಿದ್ದರೆ ಯಾವ ಅಧಿನಿಯಮದ ಪ್ರಕಾರ, ಇಲ್ಲದಿದ್ದರೆ, ಅವರ ಕರ್ತವ್ಯಗಳು ಮತ್ತು ಅಧಿಕಾರ ವ್ಯಾಪ್ತಿ?

ಇ) ಶ್ರೀ ಪಾಟೀಲ್ ಪುಟ್ಟಪ್ಪನವರು ಸರ್ಕಾರಿ ಮತ್ತು ಅರೆಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಿ ಸಭೆಗಳನ್ನು ಕರೆದು ನೌಕರರಿಗೆ ಕಚೇರಿಗಳಲ್ಲಿ ಕನ್ನಡವನ್ನು ಬಳಸದಿದ್ದರೆ ಅಮಾನತ್ತಿನಲ್ಲಿಡುವುದಾಗಿಯೂ ಕೆಲಸದಿಂದ ವಜಾ ಮಾಡುವುದಾಗಿ ಆದೇಶ ನೀಡುವುದು, ಹೆದರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಅಂಗಡಿ ಮಾಲೀಕರು, ಕೈಗಾರಿಕೋದ್ಯಮಿಗಳೂ, ಖಾಸಗೀ ಸಂಸ್ಥೆಯವರು ನಾಮ ಫಲಕಗಳನ್ನು ಕನ್ನಡದಲ್ಲಿ ಬರೆಸಿಕೊಳ್ಳದಿದ್ದಲ್ಲಿ ಕಾನೂನು ಪ್ರಕಾರ ಶಿಕ್ಷೆಗೊಳಪಡಿಸುವುದಾಗಿ ತಿಳಿಸಿ ಬೆಳಗಾವಿ ಮತ್ತು ಧಾರವಾಡ ಜಿಲ್ಲಾಧಿಕಾರಿಗಳು ಪತ್ರ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಯಾರ ಆದೇಶದ ಮೇಲೆ ಜಿಲ್ಲಾಧಿಕಾರಿಗಳು ಈ ಪತ್ರಗಳನ್ನು ಹೊರಡಿಸಿದ್ದಾರೆ?

ಉ) ಕಾನೂನಿನ ರೀತ್ಯಾ ಯಾವ ಅಧಿಕಾರವೂ ಇಲ್ಲದೆ ಸರ್ಕಾರಿ ನೌಕರರಿಗೂ ಮತ್ತು ಇತರರಿಗೂ ಲಿಖಿತ ಮತ್ತು ಮೌಖಿಕವಾಗಿ ಆಜ್ಞೆಯನ್ನು ಕೊಡುತ್ತಿರುವುದರಿಂದ ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ಅಧ್ಯಕ್ಷರ ವಿರುದ್ಧ ಸರ್ಕಾರವು ಏನು ಕ್ರಮ ತೆಗೆದುಕೊಳ್ಳಲಿದೆ?

ಊ) ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ನೇಮಕ ಮಾಡಿದಾಗಿನಿಂದ ಇಲ್ಲಿಯವರೆಗೂ ಆಗಿರುವ ವೆಚ್ಚವೆಷ್ಟು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ. ಸಮಿತಿಯ ಕಾರ್ಯವ್ಯಾಪ್ತಿಯನ್ನು ಅನುಬಂಧದಲ್ಲಿ ನಮೂದಿಸಲಾಗಿದೆ.

ಇ) ಶ್ರೀ ಪಾಟೀಲ್ ಪುಟ್ಟಪ್ಪನವರು ಕಚೇರಿಗಳಿಗೆ ಭೇಟಿ ಇತ್ತು ಸಭೆಗಳನ್ನು ನಡೆಸಿ ಆಡಳಿತದಲ್ಲಿ ಕನ್ನಡವನ್ನು ಹೆಚ್ಚು ಹೆಚ್ಚು ಬಳಕೆಗೆ ತರಲು ಇರುವ ತೊಂದರೆಯನ್ನು ತಿಳಿದುಕೊಂಡು ಸರಿಪಡಿಸಲು ಪ್ರಯತ್ನಿಸಿದರೇ ವಿನಃ ಕಚೇರಿಗಳಲ್ಲಿ ಕನ್ನಡವನ್ನು ಬಳಕೆಗೆ ತರದಿದ್ದರೆ ಅಮಾನತ್ತಿನಲ್ಲಿಡುವುದಾಗಿ, ಕೆಲಸದಿಂದ ವಜಾ ಮಾಡುವುದಾಗಿ ಯಾರನ್ನೂ ಹೆದರಿಸಿ ಆಜ್ಞೆಯನ್ನು ಹೊರಡಿಸಿರುವುದಿಲ್ಲ ಅಥವಾ ಹೊರಡಿಸುತ್ತಾ ಇಲ್ಲ.

ಈ) ಹೌದು. ಅಧಿಸೂಚನೆ ಸಂಖ್ಯೆ ಎಸ್.ಡಬ್ಲ್ಯು.ಎಲ್. ೪ ಎಲ್.ಎಸ್.ಸಿ. ೮೪, ದಿನಾಂಕ ೧೧-೧-೧೯೮೫ರ ಪ್ರಕಾರ.

ಉ) ಉದ್ಭವಿಸುವುದಿಲ್ಲ. ಅಧ್ಯಕ್ಷರು ಲಿಖಿತವಾಗಿಯಾಗಲೀ, ಬಾಯಿ ಮಾತಿನಲ್ಲಾಗಲೀ ಆದೇಶವನ್ನು ಹೊರಡಿಸಿರುವುದಿಲ್ಲ. ರಾಜಭಾಷಾ ಅಧಿನಿಯಮ ೧೯೬೩ರ ಕೆಳಗೆ ಹೊರಡಿಸಲಾದ ಆದೇಶಗಳನ್ನು ಕಾರ್ಯಗತಗೊಳಿಸಲು ಮಂಜವಿ ಮಾಡಿದ್ದಾರೆ.

ಊ) ರೂ. ೧.೩೫,೪೦೮-೬೦.

ವಿಧಾನಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೪೦೬ (ಆ) ಉತ್ತರಕ್ಕೆ ಅನುಬಂಧ

ಕನ್ನಡ ಕಾಪಲು ಮತ್ತು ಗಡಿ ಸಲಹಾ ಸಮಿತಿ ಕಾರ್ಯಕ್ರಮಗಳು:

ಕರ್ತವ್ಯಗಳು;

ಅ) ಮಹಾಜನ್ ಆಯೋಗದ ವರದಿಯ ಚೌಕಟ್ಟಿನಲ್ಲಿ ಗಡಿ ವಿಷಯವಾಗಿ ರಾಜ್ಯ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡುವುದು.

ಆ) ಸರ್ಕಾರದ ರಾಜ್ಯಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳು ಕಟ್ಟುನಿಟ್ಟಾಗಿ ಪ್ರಯತ್ನಿಸಿರುವುದೇ?

ಇ) ಈ ಪ್ರಯತ್ನಗಳಲ್ಲಿ ಏನಾದರೂ ನ್ಯೂನತೆಗಳು ಕಂಡುಬಂದಿರುವುದೇ, ಹಾಗಿದ್ದರೆ ಅವುಗಳು ಯಾವುವು?

ಈ) ಈ ನ್ಯೂನತೆಗಳಿಗೆ ಯಾರು ಅಥವಾ ಏನು ಕಾರಣವಾಗಿರುವುದು?

ಉ) ಈ ನ್ಯೂನತೆಗಳನ್ನು ಹೋಗಲಾಡಿಸಲು ಸಲಹೆಗಳೇನು?

ಊ) ಸರ್ಕಾರದ ನೀತಿಯನ್ನು ಅತ್ಯಂತ ತ್ವರಿತವಾಗಿ ಮತ್ತು ಅತ್ಯಂತ ತೃಪ್ತಕರವಾಗಿ ಕಾರ್ಯರೂಪಕ್ಕೆ ತರಲು ಏನಾದರೂ ಸಲಹೆಗಳಿವೆಯೇ?

ಪೋಲೀಸ್ ಗೋಲಿಬಾರಿನ ಬಗ್ಗೆ ತನಿಖೆ

೧೬೬ (೪೫೧) ಶ್ರೀ ವಿ. ಎಂ. ಹಿಂಡಸಗೇರಿ (ಹುಬ್ಬಳ್ಳಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ:—

ಡಿಸಂಬರ್ ೧೯೮೮ರಲ್ಲಿ, ಬೆಂಗಳೂರು, ಮೈಸೂರು ಮತ್ತು ತುಮಕೂರಿನಲ್ಲಿ ಹಲವಾರು ಮಂದಿ ಸಾವಿಗೆ ಕಾರಣವಾದ ಪೋಲೀಸ್ ಗೋಲಿಬಾರಿನ ಬಗ್ಗೆ ತನಿಖೆ ನಡೆಸಲು ಆಯೋಗವನ್ನು ಸರ್ಕಾರವು ರಚಿಸಲು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿರುವ ವಿಷಯವು ನಿಜವೇ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಯವರು).—

ಹೌದು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಜಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ನನ್ನ ಮೇಲು ರುಜು ಇರತಕ್ಕ ಈ ಕೆಳಕಂಡ ಸಾರ್ವಜನಿಕ ವಿಚಾರಗಳಿಗೆ ಸಂಬಂಧಪಟ್ಟ ಅರ್ಜಿಗಳನ್ನು ಸಭೆಯ ಮುಂದೆ ಮಂಡಿಸಬಯಸುತ್ತೇನೆ.

ಅ) ಕುಂದಾಪುರ ತಾಲ್ಲೂಕಿನ ಗಂಬಿಹೊಳೆ-ಬಸರೆ ಲೋಕೋಪಯೋಗಿ ರಸ್ತೆಯಿಂದ ಹರಿಜನ ಕಾಲೋನಿಗೆ ಸೇರುವ ಗ್ರಾಮೀಣ ರಸ್ತೆಯನ್ನು ದುರಸ್ತಿ ಮಾಡುವ ಬಗ್ಗೆ,

ಆ) ಕುಂದಾಪುರ ತಾಲ್ಲೂಕಿನ ಕೊಲ್ಲೂರು ಗ್ರಾಮದ ಕಲ್ಯಾಣಿ ಗುಡ್ಡೆ ಹರಿಜನ ಕಾಲೊನಿಗೆ ನಲ್ಲಿ ನೀರಿನ ಸೌಲಭ್ಯವನ್ನು ಕೊಡುವ ಕುರಿತು,

ಇ) ಕುಂದಾಪುರ ತಾಲ್ಲೂಕಿನ ಕಂಜರ ಕೋಣಿ ಗ್ರಾಮದ ಹಳೆಗೇರಿ, ತೆಂಕಬೆಟ್ಟು, ಕೊಲಾಗಿ ಹರಿಜನ ಕೇರಿಗಳಿಗೆ ನಲ್ಲಿ ನೀರಿನ ಸೌಲಭ್ಯದ ಕುರಿತು.